ಅ) ಕಡೆಕಾರು–ಪಡುಕೆರೆ ಹಾಗೂ ಅತ್ರಾಡಿ–ಪರಿದ– ಬೆಳ್ಳಂಪಳ್ಳಿಯಲ್ಲಿ ಬೃಹತ್ ಸೇತುವೆ ನಿರ್ಮಾಣ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಆ) ಈ ಬೃಹತ್ ಸೇತುವೆಗಳ ನಿರ್ಮಾಣಕ್ಕೆ ಅಗತ್ಯವಿರುವ ಅನುದಾನ ಯಾವಾಗ ಬಿಡುಗಡೆಯಾಗಿ ಕಾಮಗಾರಿ ಕೈಗೊಳ್ಳಲಾಗುವುದು;

ಇ) ಸಂಬಂಧಪಟ್ಟ ರಸ್ತೆಗಳು ಈಗಾಗಲೇ ಮೇಲ್ದರ್ಜೆಗೇರಿಸಲ್ಪಟ್ಟು ಮಂಜೂರಾತಿಗೊಂಡಿದ್ದರೂ ಕಾಮಗಾರಿ ವಿಳಂಬವಾಗಿರಲು ಕಾರಣಗಳೇನು;

ಈ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಈ ಸೇತುವೆಗಳ ನಿರ್ಮಾಣದ ಪ್ರಸ್ತಾವನೆಗಳು ಪರಿಶೀಲನೆಯಲ್ಲಿದೆ.

ಆ) ಬೃಹತ್ ಸೇತುವೆಗಳ ನಿರ್ಮಾಣಕ್ಕಾಗಿ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ನೇಮಿಸಿದ್ದು, ಯೋಜನಾ ವರದಿ ತಯಾರಿಕೆಯು ಪ್ರಗತಿಯಲ್ಲಿರುವುದರಿಂದ ಸದ್ಯಕ್ಕೆ ಅನುದಾನ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಸೇತುವೆಗಳ ಬೃಹತ್ ಸೇತುವೆಗಳಾಗಿರುವುದರಿಂದ ವಿವರವಾದ ಯೋಜನಾ ವರದಿಯನ್ನು ತಯಾರಿಸಬೇಕಾಗಿದ್ದು, ಯೋಜನಾ ವರದಿ ತಯಾರಿಕೆಯು ಪ್ರಗತಿಯಲ್ಲಿರುತ್ತದೆ.

ಈ) ಈ ಕಾಮಗಾರಿಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೊಳ್ಳಲು ಪರಿಗಣಿಸಲಾಗುವುದು.

449 (444) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್) :– ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

a) The action taken by the Government to develop the tourism at KGF;

b) The amount earmarked and released during the last 3 years?

a) With a view to develop tourism at K.G.F. the then Tourism Minister and the Secretary Tourism visited the K.G.F

and discussed with the officers of the B.G.M.L. But, the officers present in the meeting had revealed that the Mines are filled up with the Chemically polluted water. Even if the scheme is privatised, a large amount of money is required to shift the water from the mines. Hence that scheme could not be taken up.

b) No amount has been earmarked for this scheme.

450 (445) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್) :– ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೆ.ಜಿ.ಎಫ್ ಪಟ್ಟಣಕ್ಕೆ ಕ್ರೀಡಾಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಯೋಜನಾ ಕಾರ್ಯಕ್ರಮಗಳು ಯಾವುವು;

2) ಕಳೆದ 3 ವರ್ಷಗಳಲ್ಲಿ ನಿಗಧಿಪಡಿಸಿ ಬಿಡುಗಡೆಗೊಳಿಸಿದ ಅನುದಾನದ ಮೊತ್ತವೆಷ್ಟು?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು) :

ಅ) ಇಲಾಖಾ ಯೋಜನಾ ಕಾರ್ಯಕ್ರಮಗಳನ್ನು ತಾಲ್ಲೂಕುವಾರು ರೂಪಿಸಲಾಗಿದೆ. ಕೆ.ಜಿ.ಎಫ್ ಪಟ್ಟಣವು ಬಂಗಾರಪೇಟೆ ತಾಲ್ಲೂಕಿನ ವ್ಯಾಪ್ತಿಗೆ ಒಳಪಡುತ್ತದೆ. ಈ ಕೆಳಕಂಡ ಕಾರ್ಯಕ್ರಮಗಳನ್ನು ಕೆ.ಜಿ.ಎಫ್ ಪಟ್ಟಣಕ್ಕೆ ಹಮ್ಮಿಕೊಳ್ಳಲಾಗಿದೆ.

1) 2005–06ನೇ ಸಾಲಿನಲ್ಲಿ :

ಕಷ್ಟ ಪರಿಸ್ಥಿತಿಯಲ್ಲಿರುವ 21 ಕುಸ್ತಿ ಹಾಗೂ ಕ್ರೀಡಾಪಟುಗಳಿಗೆ ರೂ. 46,200/– ಗಳ ಮಾಸಾಶನ ನೀಡಲಾಗಿದೆ.

2) 2006–07ನೇ ಸಾಲಿನಲ್ಲಿ :

ಕಷ್ಟ ಪರಿಸ್ಥಿತಿಯಲ್ಲಿರುವ 21 ಕುಸ್ತಿ ಹಾಗೂ ಕ್ರೀಡಾಪಟುಗಳಿಗೆ ರೂ.79,500/– ಗಳ ಮಾಸಾಶನ ನೀಡಲಾಗಿದೆ.

452 (263) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :– ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?